**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರ ನ್ಯಾಯಾಲಯ,**
**ಪುತ್ತೂರು**

**ಅಸಲು ದಾವಾ ಸಂಖ್ಯೆ 336/2016**

**ದಿನಾಂಕಃ 03 ನೇ ಜುಲೈ 2023**

**ವಾದಿ/ಯರು** : ಶ್ರೀ ಕಶ್ಮೀರ್ ಡಿ ಸೋಜಾ

**ವಿರುದ್ಧ**

**ಪ್ರತಿವಾದಿ/ಯರು** : ಕರುಣಾಕರ ಯು.

**ಮಧ್ಯಂತರ ಅರ್ಜಿ ಸಂಖ್ಯೆಃ 7 ರ ಪಕ್ಷಗಾರರು**

**ಅರ್ಜಿದಾರರು** : ಕರುಣಾಕರ ಯು

**ವಿರುದ್ಧ**

**ಎದುರುದಾರರು** : ಕಶ್ಮೀರ್ ಡಿ ಸೋಜಾ

**ಃ ಸಿ.ಪಿ.ಸಿ. ಕ್ರಮಾದೇಶ XVI ನಿಯಮ 1 (3) ರ ಮೇಲಿನ ಆದೇಶಃ**

ಅರ್ಜಿದಾರರು ಪ್ರಸ್ತುತ ಮಧ್ಯಕಾಲೀನ ಅರ್ಜಿ ಸಂಖ್ಯೆ 7 ನ್ನು ಪ್ರತಿವಾದಿ ಪರ ವಕೀಲರು ಸಿ.ಪಿ.ಸಿ. ಕ್ರಮಾದೇಶ XVI ನಿಯಮ 1(3) ರಡಿಯಲ್ಲಿ ಸಲ್ಲಿಸಿ, ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಿಸಿ ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಲು ಹಾಗೂ ಅವರಿಗೆ ತುರ್ತಾಗಿ ಸಮನ್ಸ್ ನ್ನು ಜಾರಿ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

2. **ಅರ್ಜಿಯ ಸಂಕ್ಷಿಪ್ತ ಸಾರಾಂಶಃ**

ಅರ್ಜಿದಾರರು ತನ್ನ ಮೇಲ್ವಿಚಾರಣೆ ಕಾರಣದಿಂದ ತಮ್ಮ ಪ್ರತಿವಾದ ಪತ್ರ ಸಲ್ಲಿಸುವಾಗ ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಲಾಗಿಲ್ಲ. ಸಾಕ್ಷಿದಾರರ ಪಟ್ಟಿಯಲ್ಲಿ ಹೇಳಲಾದ

ಸಾಕ್ಷಿಗಳು ವಸ್ತು ಪ್ರಕರಣದ ತೀರ್ಪಿಗೆ ಸಂಬಂಧಪಟ್ಟಿರುತ್ತದೆ. ಸದರಿ ಅರ್ಜಿಯನ್ನು ಅನುಮತಿಸಿದರೆ ಎದುರುದಾರರಿಗೆ ಯಾವುದೇ ಕಷ್ಟ ನಷ್ಟ ಉಂಟಾಗುವುದಿಲ್ಲ. ಒಂದು ವೇಳೆ ಅನುಮತಿಸದೇ ಇದ್ದಲ್ಲಿ, ತನ್ನ ಪ್ರಕರಣದ ರುಜುವಾತಿಗೆ ತೊಂದರೆ ಉಂಟಾಗುತ್ತದೆ. ಆದ್ದರಿಂದ, ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಾ ಮಾಡಿ ಅರ್ಜಿಯಲ್ಲಿ ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

**3.** ಸದರಿ ಅರ್ಜಿಗೆ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಪಕ್ಷಕಾರರಲ್ಲಿ (ವಾದಿ ಅಥವಾ ಪ್ರತಿವಾದಿ) ತನ್ನನ್ನು ಮೊದಲ ಸಾಕ್ಷಿಯಾಗಿ ಪರೀಕ್ಷಿಸುವ ಮೂಲಕ ಸಾಕ್ಷ್ಯವನ್ನು ಮುನ್ನಡಸಬೇಕು ಎಂಬುವುದು ನಿಯಮವಾಗಿದ್ದು, ಪ್ರಸ್ತುತ ಡಿಬ್ಲ್ಯೂ-1 ರವರನ್ನು ಪಾಟೀಸವಾಲಿಗೆ ಒಳಪಡಿಸಿರುವುದಿಲ್ಲ ಹಾಗೂ ಮಧ್ಯಕಾಲೀನ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸರಿಯಾದ ಕಾರಣವನ್ನು ತಿಳಿಸಿಲ್ಲ. ಉದ್ದೇಶಿತ ಸಾಕ್ಷಿಯು ದಾವೆಗೆ ಯಾವ ವಿಷಯದಲ್ಲಿ ಸಾಕ್ಷಿ ನುಡಿಯುತ್ತಾರೆ ಎಂದು ತಮ್ಮ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವುದಿಲ್ಲ. ಆದ್ದರಿಂದ, ಸದರಿ ಮಧ್ಯಕಾಲೀನ ಅರ್ಜಿಯನ್ನು ವಜಾಗೊಳಿಸಲು ಪ್ರಾರ್ಥಿಸಿರುತ್ತಾರೆ.

**4.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಿದ ನಂತರ ಈ ಅರ್ಜಿಯ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ ಸಂಖ್ಯೆ.1ಃ** ಪ್ರಸ್ತುತ ಮಧ್ಯಾಕಾಲೀನ ಅರ್ಜಿಯನ್ನು ಪುರಸ್ಕರಿಸಲು ಸಕಾರಣ ಇದೆಯೇ ?

**ಅಂಶ ಸಂಖ್ಯೆ.2ಃ** ಯಾವ ಆದೇಶ ?

5. ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಿದ್ದೇನೆ .

ಅಂಶ ಸಂಖ್ಯೆ.1 ಃ ನಕಾರಾತ್ಮಕವಾಗಿ

ಅಂಶ ಸಂಖ್ಯೆ.2 ಃ ಮುಂದಿನ ಆದೇಶದಂತೆ

**ಃ ಕಾರಣಗಳು ಃ**

6. **ಅಂಶ ಸಂಖ್ಯೆ1ಃ** ಅರ್ಜಿದಾರರು ತಮ್ಮ ಮಧ್ಯಕಾಲೀನ ಅರ್ಜಿ ಸಂಖ್ಯೆಃ 9 ನ್ನು ಸಲ್ಲಿಸಿ ಪ್ರತಿವಾದ ಪತ್ರದೊಂದಿಗೆ ಸಾಕ್ಷಿದಾರರ ಪಟ್ಟಿಯನ್ನು ಮೇಲ್ವಿಚಾರಣೆ ಕಾರಣದಿಂದ ಸಲ್ಲಿಸಿಲ್ಲ ಹಾಗೂ ಸದರಿ ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಿಸಿ ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಲು ಮನವಿ ಮಾಡಿದ್ದು, ಇದಕ್ಕೆ ಪ್ರತಿಯಾಗಿ ಎದುರುದಾರರು ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಸದರಿ ಪ್ರಕರಣವು ಪ್ರಸ್ತುತ ಡಿಬ್ಲ್ಯೂ-1 ರವರ ಪಾಟೀಸವಾಲಿಗೆಂದು ಇರುತ್ತದೆ ಹಾಗೂ ಸದರಿ ಡಿಬ್ಲ್ಯೂ-1 ರವರ ಪಾಟೀಸವಾಲು ಪ್ರಾರಂಭವಾಗಿರುವುದಿಲ್ಲ. ಈ ಹಂತದಲ್ಲಿ ಅರ್ಜಿದಾರರು ಸದರಿ ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಡಿಬ್ಲ್ಯೂ-1 ರವರ ಪಾಟೀಸವಾಲಿಗೆಂದು ಇದ್ದರೂ ಸಹ ತೀವ್ರ ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ಹಾಗೂ ನ್ಯಾಯಾಲಯಕ್ಕೆ ಸೂಕ್ತವೆನಿಸುವಂತಹ ಸಕಾರಣಗಳು ಕಂಡು ಬಂದಲ್ಲಿ ನ್ಯಾಯಾಲಯವು ವಾದ ಪತ್ರಗಳ ರುಜುವಾತಿಗಾಗಿ ಸಾಕ್ಷ್ಯ ವಿಚಾರಣೆ ಮಾಡಲು ಒಬ್ಬ ಸಾಕ್ಷಿದಾರರ ವಿಚಾರಣೆಯು ಮುಕ್ತಾಯವಾಗದಿದ್ದರೂ ಸಹ ಒಂದು ಹಂತ ಮುಂದೆ ಹೋಗಿ ಅಂತಹ ರುಜುವಾತಿಗೆ ಅನುಮತಿ ನೀಡಬಹುದಾಗಿರುತ್ತದೆ. ಆದರೆ, ಅರ್ಜಿದಾರರು ಸದರಿ ಅರ್ಜಿಯಲ್ಲಿ ಯಾವ ಕಾರಣಕ್ಕಾಗಿ ಸದರಿ ಸಾಕ್ಷಿದಾರರನ್ನು ಸದರಿ ಪ್ರಕರಣದಲ್ಲಿ ತುರ್ತಾಗಿ ಕರೆಯಬೇಕಾಗಿರುತ್ತದೆ ಎಂಬುವುದನ್ನು ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಸಾಕ್ಷಿ ನುಡಿಯಬೇಕಾಗಿರುತ್ತದೆ ಎಂಬ ಯಾವುದೇ ಸಕಾರಣವನ್ನು ಸಹ ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಹೀಗಿರುವಾಗ್ಗೆ, ಪ್ರಸ್ತುತ ಡಿಬ್ಲ್ಯೂ-1 ರವರ ಪಾಟೀಸವಾಲಿಗೆಂದು ಇರುವ ಹಂತದಿಂದ ನ್ಯಾಯಾಲಯವು ಯಾವ ಕಾರಣಕ್ಕಾಗಿ ಸದರಿ ಅರ್ಜಿಯನ್ನು ಅನುಮತಿಸಬೇಕು ಎಂಬುವುದಕ್ಕೆ ಯಾವುದೇ ಸಕಾರಣಗಳು ಅರ್ಜಿದಾರರ ಪ್ರಮಾಣ ಪತ್ರಿಕೆಯಲ್ಲಿ ಕಂಡು ಬಾರದೇ ಇರುವುದರಿಂದ ಸದರಿ ಅಂಶ ಸಂಖ್ಯೆಃ1 ಕ್ಕೆ **ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

7. **ಅಂಶ ಸಂಖ್ಯೆ2ಃ** ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

**ಆದೇಶ**

ಪ್ರತಿವಾದಿ/ಅರ್ಜಿದಾರರ ಪರ ವಕೀಲರು ಸಿ.ಪಿ.ಸಿ. ಕ್ರಮಾದೇಶ XVI ನಿಯಮ 1(3) ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ -7 ನ್ನು ವಜಾಗೊಳಿಸಲಾಗಿದೆ.

(ಶಿವಣ್ಣ ಹೆಚ್ ಆರ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪುತ್ತೂರು